ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಗೃಹ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ    ದಿನಾಂಕ : DATE : 02/10/2019

# ಮಠಾಧೀಶರು, ಆಪ್ತರ ಮೇಲೂ ಕಳ್ಳಗಿವಿ!

## ಟೆಲಿಫೋನ್ ಕದ್ದಾಲಿಕೆ ಪ್ರಕರಣ | ಸಿಬಿಐ ತನಿಖೆ ವೇಳೆ ಬಹಿರಂಗ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು 2-10-19

ರಾಜಕಾರಣಿಗಳು, ಪೊಲೀಸ್ ಅಧಿಕಾರಿಗಳಲ್ಲದೆ ಪ್ರಮುಖ ಮಠಾಧೀಶರು ಮತ್ತು ಅವರ ಆಪ್ತರ ಫೋನ್‌ಗಳನ್ನೂ ಕದ್ದಾಲಿಕೆ ಮಾಡಿರುವುದು ಸಿಬಿಐ ತನಿಖೆಯಿಂದ ಬೆಳಕಿಗೆ ಬಂದಿದೆ.

ಆದಿಚುಂಚನಗಿರಿ ಶ್ರೀ ನಿರ್ಮಲಾನಂದನಾಥ ಸ್ವಾಮಿಗಳ ಮೊಬೈಲ್ ನಂಬರ್‌ಗೆ ಕಳ್ಳಗಿವಿ ಇಟ್ಟಿದ್ದ ವಿಚಾರ ಬೆಳಕಿಗೆ ಬಂದಿತ್ತು. ಇವರಲ್ಲದೆ, ರಾಜ್ಯದ ಪ್ರಮುಖ ಸಮುದಾಯಕ್ಕೆ ಸೇರಿದ ಮಠಗಳ ಮಠಾಧೀಶರ ಮೊಬೈಲ್‌ಗಳಿಗೆ ಮತ್ತು ದೂರವಾಣಿಗಳಿಗೂ ಕಳ್ಳಗಿವಿ ಇಟ್ಟಿದ್ದರು. ಲೋಕಸಭಾ ಚುನಾವಣೆ ಮತ್ತು ಸರ್ಕಾರ ಅತಂತ್ರ ಸ್ಥಿತಿಗೆ ತಲುಪಿದಾಗ ರಾಜಕೀಯ ಮುಖಂಡರು ಮಠಗಳಿಗೆ ಭೇಟಿ ಕೊಟ್ಟು ಸ್ವಾಮಿಗಳ ಜತೆಗೆ ಚರ್ಚೆ ನಡೆಸುತ್ತಿದ್ದರು. ಕೆಲ ರಾಜಕೀಯ ಮುಖಂಡರು ಮಠಕ್ಕೆ ದೂರವಾಣಿ ಕರೆ ಮಾಡಿ ಸಂಭಾಷಣೆ ಕೇಳಿಸಿಕೊಳ್ಳಲು ಪೊಲೀಸರು ಟ್ಯಾಪ್ ಮಾಡಿದ್ದರು. ಇದರಿಂದ ರಾಜಕೀಯವಾಗಿ ಮಠಗಳನ್ನು ನಿಯಂತ್ರಿಸುವ ಪ್ರಯತ್ನ ಸಹ ನಡೆಸಿದ್ದರು ಎನ್ನಲಾಗಿದೆ. ಆದರೆ, ಯಾವ ಮಠಗಳು ಮತ್ತು ಸ್ವಾಮಿಗಳ ಫೋನ್ ಟ್ಯಾಪ್ ಆಗಿತ್ತು ಎಂಬುದ ಹೆಸರು ಹೇಳಲು ಸಾಧ್ಯವಿಲ್ಲ ಎಂದು ಸಿಬಿಐ ಮೂಲಗಳು ತಿಳಿಸಿವೆ.

### ಸೋರಿಕೆ ಮಾಡಿಲ್ಲ ಎಂದ ಅಲೋಕ್

**ಕದ್ದಾಲಿಕೆ ಆಡಿಯೋ ಇದ್ದಿದ್ದು ನಿಜ. ಆದರೆ, ಸೋರಿಕೆ ಮಾಡಿಲ್ಲ. ವಿವಾದ ಸೃಷ್ಟಿಸಿದ ಬಳಿಕ ಡಿಲೀಟ್ ಮಾಡಿದ್ದೇನೆ ಎಂದು ಅಲೋಕ್‌ಕುಮಾರ್ ಹೇಳಿಕೆ ನೀಡಿದ್ದಾರೆ ಎನ್ನಲಾಗಿದೆ. ಇವರ ಹೇಳಿಕೆ ಮೇಲೆ ಇಡೀ ಪ್ರಕರಣದ ತನಿಖೆ ನಿಂತಿದೆ.**